ಶ್ರೀ ವಿ. ಮುನಿಯಪ್ಪ.—ಆದಷ್ಟು ಜಾಗ್ರತೆ ಈಗ ಲಾದರೂ ಮಂಜೂರುಮಾಡಿ ಕಾಮಗಾರಿ ತೆಗೆದು ಕೊಳ್ಳುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಈ ಅಂದಾಜು ಪರಿಶೀಲನೆಯಲ್ಲಿದೆ. ಆದ್ದರಿಂದ ನಿರ್ದಿಷ್ಟವಾಗಿ ಈ ದಿನವೇ ಜವಾಬು ಹೇಳುವುದಕ್ಕಾಗುವುದಿಲ್ಲ.

ಶ್ರೀ ವಿ. ಮುನಿಯಪ್ಪ.—ಈಗಾಗಲೇ 4-5 ವರ್ಷಗಳಾಗಿವೆ. ಇನ್ನೂ ಎಷ್ಟು ವರ್ಷಗಳು ಬೇಕಾಗುತ್ತದೆ ?

ಶ್ರೀ ಕಡಿದಾಳ್ ಮಂಜಪ್ಪ.—4-5 ವರ್ಷಗಳು ಆಗಿವೆ ಎಂದು ಒಪ್ಪಿಕೊಂಡಿಲ್ಲ.

Pick-up channel near Belavatha, Mysore Taluk.

Q.—405. **Sri SHIVANANJE GOWDA** (Mysore Taluk).—

Will the Government be pleased to state :—

(*a*) whether they are aware that there is no water in the pick-up channel which is near the R.B.L.L. channel near Belavatha in Kasaba Hobli, Mysore Taluk ;

(*b*) the extent of land brought under wet cultivation under the said pick-up channel ;

(*c*) the expenditure incurred by them on this channel ;

(*d*) whether it has not come to their notice that it would help in agricultural operations if the sewage water of Narasimharaja Mohalla in Mysore City is led to the abovesaid pick-up channel ?

A.—**Sri Kadidal MANJAPPA** (Minister for Revenue and Public Works).—

(*a*) No.

(*b*) 89 acres 36 guntas.

(*c*) Rs. 64,930.

(*d*) This has to be examined.

ಶ್ರೀ ಶಿವನಂಜೇಗೌಡ.—ಮೊದಲನೆ ಪ್ರಶ್ನೆಗೆ ಉತ್ತರವಾಗಿ ನಾಲೆಯನಮಾಪದಲ್ಲಿರುವ ಪಿಕ್‌ಅಪ್ ನಾಲೆಯಲ್ಲಿ ನೀರು ಇಲ್ಲದಿರುವುದು ಗೊತ್ತಿಲ್ಲ ಎಂದು ಹೇಳಿದ್ದೀರಿ. ರಿಪೋರ್ಟ್ ಬಂದಮೇಲೂ ನಾಲೆಯಲ್ಲಿ ನೀರಿಲ್ಲ ಎಂದು ತಿಳಿದುಕೊಂಡಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ನೀರಿಲ್ಲ ಎಂದು ಹೇಳಿರುವುದು ಸರಿಯಲ್ಲ. ನೀರು ಇದೆ ಎಂದು ಹೇಳಿದ್ದೇವೆ.

ಶ್ರೀ ಶಿವನಂಜೇಗೌಡ.—ನೀರಿಲ್ಲದೆ ಪಾಳು ಬಿದ್ದಿರತಕ್ಕ ಜಮೀನು ಎಷ್ಟು ಎಕರೆ ಇದೆ ಎಂದು ಅಜಮಾಯಿಷಿ ಮಾಡಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಅಜಮಾಯಿಷಿಮಾಡಿ Engineer report ಕಳುಹಿಸಿದ್ದಾರೆ.

Mr. SPEAKER.—The Hon'ble Member has not approached the Minister evidently.

ಶ್ರೀ ವಿ. ಮುನಿಯಪ್ಪ.—ಮೈನೂರಿನಿಂದ ಕೊಚ್ಚೆ ನೀರನ್ನು ಈ ನಾಲೆಗೆ ಬಿಟ್ಟರೆ, ಸ್ವಲ್ಪ ಜಾಸ್ತಿ ನೀರು ಜಮೀನುಗಳಿಗೆ ಆಗುತ್ತದೆ ಎಂಬುದನ್ನು ತಿಳಿದು ಕೊಂಡಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಸರ್ಕಾರದ ಮುಂದೆ ಇಟ್ಟಿರುವ ಸಲಹೆಯನ್ನು ಸರ್ಕಾರದವರು ಆಲೋಚನೆ ಮಾಡುತ್ತಾರೆ.

I.A.S. lists (inclusion of fresh names of Mysore Officers).

Q.—499. **Sri K. PRABHAKAR** (Nelamangala—Scheduled Castes).—

Will the Government be pleased to state :—

(*a*) when did Government of India write to the Government of Mysore to propose fresh names to be included in the I.A.S. lists ;

(*b*) whether any reference has been made to the claims of any unrepresented community in particular ?

A.—**Sri Kadidal MANJAPPA** (Minister for Revenue and Public Works).—

(*a*) The Government of India did not propose at any time any fresh names to be included in the I.A.S. Special Eligibility List.

(*b*) Does not arise in view of answer to (*a*) above.

ಶ್ರೀ ಕೆ. ಪ್ರಭಾಕರ್.—I.A.S. ಆಫೀಸರುಗಳನ್ನು ಸಂಸ್ಥಾನದಿಂದ ಕಳುಹಿಸುವ ಬಗ್ಗೆ ಕೇಂದ್ರ ಸರ್ಕಾರದವರು ಎಷ್ಟು ಸಲ ಕಾಗದ ಬರೆದಿದ್ದಾರೆ ?

ಶ್ರೀ ಕಡಿದಾಳ್ ಮಂಜಪ್ಪ.—I.A.S. ಆಫೀಸರುಗಳನ್ನು ಯಾವ ಉದ್ದೇಶದಿಂದ ಕಳುಹಿಸುವುದು ?

ಶ್ರೀ ಕೆ. ಪ್ರಭಾಕರ್.—ಭಾರತ ಸರ್ಕಾರದವರು I.A.S. listನ್ನು ತಯಾರು ಮಾಡುವಾಗ ಯಾವುದಾದರೂ ಕಾಗದ ಬರೆದಿದ್ದರೆ ?

ಶ್ರೀ ಕಡಿದಾಳ್ ಮಂಜಪ್ಪ.—I.A.S. ದರ್ಜೆಯ ನೌಕರರಿಗೆ ನೇರವಾಗಿ ಪರೀಕ್ಷೆಯ ನಂಬರ್‌ಗಳಿಂದ ಕೆಲವರನ್ನು ನೇಮಕಮಾಡುತ್ತಾರೆ. ಕೆಲವರನ್ನು promotion ಮುಖಾಂತರ ನೇಮಕಮಾಡುತ್ತಾರೆ. ನೇರವಾಗಿ ನೇಮಕಮಾಡತಕ್ಕ ವಿಷಯದಲ್ಲಿ ನಾವು listನ್ನು ಕಳುಹಿಸುವುದಕ್ಕೆ ಆಗುವುದಿಲ್ಲ.

ಶ್ರೀ ಕೆ. ಪ್ರಭಾಕರ್.—ಈಗಿರತಕ್ಕ ಏರ್ಪಾಡಿನಿಂದ ಪ್ರಾತಿನಿಧ್ಯ ಸಿಕ್ಕುವುದು ಕಷ್ಟ, ಅದಕ್ಕೋಸ್ಕರ ಖಚಿತವಾಗಿ proposal ಕಳುಹಿಸಿ ಎಂದು ಹೇಳಲಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಈ ಪ್ರಶ್ನೆಯನ್ನು ಮೂರನೆಯ ಸಾರಿ ಕೇಳುತ್ತಾ ಇರುವುದು. ಇದು